ಮರೆತು ಎಂದಿನ ಅಭ್ಯಾಸದಂತೆ, ಏಕಾಗ್ರತೆಗಾಗಿ ಸಿಳ್ಳು ಹಾಕಲಾರಂಭಿಸಿದ. ಎಲ್ಲರೂ ಮಂತ್ರಮುಗ್ಧರಾಗಿ ಆಶ್ಚರ್ಯದಿಂದ ಅವನನ್ನೇ ನೋಡತೊಡಗಿದರು.

ಮರುಗಳಿಗೆಯಲ್ಲೇ ಜಿಮ್ಮಿಯ ಡ್ರಿಲ್ ಲಾಕರಿನ ಬಾಗಿಲಿನ ಮೇಲೆ ರಂಧ್ರ ಕೊರೆಯಲಾರಂಭಿಸಿತು. ಹತ್ತೇ ನಿಮಿಷದಲ್ಲಿ ಜಿಮ್ಮಿ ಲಾಕರಿನ ಮೂರೂ ಕೊಂಡಿಗಳನ್ನು ತೆರೆದು ಬಾಗಿಲನ್ನು ತೆರೆದ.

ಅಗಾಥ ಅತ್ತೂ ಅತ್ತು ಸುಸ್ತಾಗಿ ನೆಲದ ಮೇಲೆ ಬಿದ್ದಿದ್ದಳಾದರೂ ಜೀವಂತವಿದ್ದಳು. ಅವಳ ತಾಯಿ ಓಡುತ್ತಾ ಅವಳನ್ನು ತಬ್ಬಿ ಎದೆಗವುಚಿಕೊಂಡಳು.

ಜಿಮ್ಮಿ ವ್ಯಾಲೆಂಟಿನ್ ತನ್ನ ಸಾಮಾನುಗಳನ್ನೆಲ್ಲಾ ಸೂಟ್ಕೇಸಿಗೆ ತುಂಬಿ ಕೋಟನ್ನು ಎತ್ತಿಕೊಂಡ. ಯಾರನ್ನೂ ಕಾಯದೆ ಸೂಟ್ಕೇಸನ್ನೆತ್ತಿ ಹೊರನಡೆಯತೊಡಗಿದ. ಅವನ ಕೆಲಸ ಮುಗಿದಿತ್ತು.

'ರಾಲ್ಫ್?' ಯಾರೋ ಅವನನ್ನು ಕೂಗಿದರು.

ಅವನು ಬಾಗಿಲ ಬಳಿ ನಿಂತಿದ್ದ.

'ಹಲೋ ಬೆನ್' ಎಂದ ಜಿಮ್, ಸುಸ್ತಾದವನಂತೆ. 'ನೀನು ಇಲ್ಲಿಗೂ ಬಂದು ಮುಟ್ಟಿದೆಯಾ! ಆಯ್ತು. ನಡೆ ಹೋಗೋಣ. ನಾನು ತಯಾರಾಗಿದ್ದೇನೆ.'

'ಕ್ಷಮಿಸಿ ಮಿಸ್ಟರ್ ರಾಲ್ಫ್ ಡಿ. ಸ್ಪೆನ್ಸರ್! ನೀವು ಯಾರೆಂದೇ ನನಗೆ ಗೊತ್ತಿಲ್ಲ! ಅದೋ ಅಲ್ಲಿ ಕುದುರೆ ಗಾಡಿ ಕಾಯುತ್ತಿದೆ. ನಿಮ್ಮದೇ ತಾನೆ?'

ಇಷ್ಟು ಹೇಳಿ ಡಿಟೆಕ್ಟಿವ್ ಬೆನ್ ಪ್ರೈಸ್ ಹ್ಯಾಟನ್ನು ತಲೆಗೇರಿಸುತ್ತಾ, ಬ್ಯಾಂಕಿನ ಮೆಟ್ಟಿಲುಗಳನ್ನು ಇಳಿದು ಜನಸಂದಣಿಯೊಳಗೆ ಕರಗಿ ಹೋದ.

## ಓ. ಹೆನ್ರಿ

ಓ. ಹೆನ್ರಿ ಹೆಸರಿನಿಂದ ಚಿರಪರಿಚಿತನಾಗಿರುವ ಅಮೆರಿಕದ ಲೇಖಕ ವಿಲಿಯಂ ಸಿಡ್ನಿ ಪೋರ್ಟರ್ ತನ್ನ ಹಾಸ್ಯ ಮಿಶ್ರಿತ ವಿಲಕ್ಷಣ ತಿರುವು ಕೊಡುವ ಕತೆಗಳಿಗೆ ಪ್ರಸಿದ್ಧ. ಔಷಧ ರಸಾಯನ ಶಾಸ್ತ್ರ ಕಲಿತ ಅವನು ಬ್ಯಾಂಕ್ ನೌಕರಿಗೆ ಸೇರಿ ಬ್ಯಾಂಕಿನಿಂದ ದುಡ್ಡು ಲಪಟಾಯಿಸಿದ ಆರೋಪ ಹೊತ್ತು ಜೈಲು ಸೇರುತ್ತಾನೆ. ತನ್ನ ಹೆಸರು ಬದಲಾಯಿಸಿ ಜೈಲಿನಲ್ಲಿ ಸಣ್ಣ ಕತೆಗಳನ್ನು ಬರೆಯಲು ತೊಡಗುತ್ತಾನೆ. ಮುಂದೆ ಅದೇ ಹೆಸರಿನಿಂದ ಪ್ರಖ್ಯಾತನಾಗುತ್ತಾನೆ.

## ಜೆ.ವಿ. ಕಾರ್ಲೊ

ಅನುವಾದಕರು ಪ್ರಸ್ತುತ ಹಾಸನದಲ್ಲಿ ನೆಲೆಸಿದ್ದಾರೆ. ಕಾಲೇಜು ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿ ಹಳ್ಳಿಗೆ ಸೇರಿದ್ದ ಅವರನ್ನು ಕಲಾವಿದ ಗೆಳೆಯರಾದ ಕೆ.ಟಿ. ಶಿವಪ್ರಸಾದರು ತಾವು ವಿನ್ಯಾಸ ಮಾಡಲು ಶುರುಮಾಡಿದ ಮನೆಗಳನ್ನು ಕಟ್ಟುವ ಕೆಲಸಕ್ಕೆ ಹಚ್ಚಿದರು. ಅದನ್ನೇ ಈಗಲೂ ಮುಂದುವರೆಸಿಕೊಂಡು ಬಂದಿದ್ದಾರೆ. ಅನುವಾದಿತ ಕತೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಕನ್ನಡ ಮಾತ್ರವಲ್ಲದೆ ಕೊಂಕಣಿ ಭಾಷೆಯಲ್ಲಿ ಅವರ 80ಕ್ಕೂ ಹೆಚ್ಚು ಸಣ್ಣ ಕತೆಗಳ ಅನುವಾದಗಳು ಹಾಗೂ ಮೂರು ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಿವೆ.